ದಿನಾಂಕಃ 02.07.2025

ಎಸ್.ಸಿಃ 25/2023

ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ

ಸರ್ಕಾರದವರು ನಮಗೆ ರೇಷನ್ ಕಾರ್ಡ್ ಕೊಟ್ಟಿದ್ದಾರೆ. ನನಗೆ ಮತ್ತು ನನ್ನ ಮಕ್ಕಳಿಗೆ ಆದಾರ್ ಕಾರ್ಡ್ ಎಲೆಕ್ಷನ್ ಕಾರ್ಡ್ ಸಹ ಕೊಟ್ಟಿದ್ದಾರೆ ಎಂದರೆ ಸರಿ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಅವುಗಳನ್ನು ಹಾಜರು ಮಾಡದೇ ಇದ್ದರೂ ಸಹ ಹಾಜರು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯನ್ನು ನಾನು ಕಣ್ಣಾರೆ ನೋಡಿದ್ದೇನೆ. ನಾನು ಮತ್ತು ನನ್ನ ಯಜಮಾನರು ಹಸುವನ್ನು ಹಿಡಿದುಕೊಂಡು ಹೋಗುತ್ತಿದ್ದೆವು, ಆಗ ವಿದ್ಯುತ್ ವಯರ್ ತುಂಡಾಗಿ ಬಿದ್ದು ಹೋಗಿತ್ತು, ಅದರ ಮೇಲೆ ಹಸು ಕಾಲನ್ನು ಇಟ್ಟಿರುತ್ತದೆ. ಕೇಸನ್ನು ಹಾಕಿಸುವಾಗಿ ನಾನು ಮತ್ತು ನನ್ನ ಯಜಮಾನರು ಇಬ್ಬರೂ ಹಸುವನ್ನುಹೊಡೆದುಕೊಂಡು ಹೋಗುತ್ತಿದ್ದೆವು ಎಂದು ಹೇಳಿರುತ್ತೇನೆ. ನೀವು ಆ ರೀತಿ ಹೇಳಿಲ್ಲ, ಪರಿಹಾರ ಪಡೆದುಕೊಳ್ಳುವ ಸಲುವಾಗಿ ಆ ರೀತಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಹಸುವಿಗೆ ಕಟ್ಟಿದ್ದ ಹಗ್ಗ ಪ್ಲಾಸ್ಟಿಕ್ ಹಗ್ಗ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಹಸು ನಮ್ಮ ಮುಂದೆ ಹೋಗುತ್ತಿತ್ತು. ಪ್ಲಾಸ್ಟಿಕ್ ಮೂಲಕ ವಿದ್ಯುತ್ ಹರಿಯದೇ ಇರುವ ಕಾರಣ ನನ್ನ ಯಜಮಾನರು ಬಚಾವಾದರು ಎಂದರೆ ಸರಿ. ಹಸುವಿಗೆ ಮೂಗುದಾರನ್ನು ಪ್ಲಾಸ್ಟಿಕ್ ಹಗ್ಗದಿಂದಲೇ ಹಾಕಿದ್ದೆವು. ಹಸುವನ್ನು ಟಾರ್ ರಸ್ತೆಯಲ್ಲಿ ಹೊಡೆದುಕೊಂಡು ಹೋಗುತ್ತಿದ್ದಿರಾ ಅಥವಾ ಗದ್ದೆಯಲ್ಲಿ ಹೊಡೆದುಕೊಂಡು ಹೋಗುತ್ತಿದ್ದಿರ ಎಂದರೆ ಸಾಕ್ಷಿ ಗದ್ದೆಯಲ್ಲಿ ಎಂದು ಉತ್ತರಿಸುತ್ತಾರೆ. ಗದ್ದೆಯಲ್ಲಿ ಹಳ್ಳ ದಿಣ್ಣೆ ಎಲ್ಲವೂ ಇರುತ್ತದೆ ಎಂದರೆ ಸರಿ. ಈ ಕೇಸಿನ ವಿದ್ಯಾಮಾನಗಳನ್ನು ಹೇಗೆ ತಿಳಿದುಕೊಂಡಿದ್ದೀರಿ ಎಂದರೆ ಸಾಕ್ಷಿ ನಾನು ನನ್ನ ಯಜಮಾನರ ಜೊತೆಯೂ ಕೇಸಿಗೆ ಬರುತ್ತಿದೆನು ಅವರು ತೀರಿಕೊಂಡು ಮೂರು ವರ್ಷಗಳಾಗಿವೆ ಆ ನಂತರ ನಮ್ಮ ವಕೀಲರಿಂದ ಮಾಹಿತಿಯನ್ನು ತಿಳಿದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ಯಜಮಾನರು ತೀರಿಹೋದ ನಂತರ ಈ

ಕೇಸು ಹಾಕಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಈ ಕೇಸಿನ ವಿದ್ಯಾಮಾನಗಳನ್ನು ತಿಳಿದುಕೊಳ್ಳಲು ನಿಮ್ಮ ಯಜಮಾನರು ಬದುಕಿರಲಿಲ್ಲ ಎಂದರೆ ಸಾಕ್ಷಿ ನಮ್ಮ ಯಜಮಾನರು ಕೇಸು ಹಾಕಿ 8 ವರ್ಷಗಳಾಗಿತ್ತು ಆ ಕೇಸಿನಲ್ಲಿ ನಾನೂ ಬರುತ್ತಿದ್ದೆನು ಎಂದು ಉತ್ತರಿಸುತ್ತಾರೆ.

2. ಈ ಕೇಸನ್ನು ಪರಿಹಾರಕ್ಕಾಗಿ ಕೆ.ಇ.ಬಿ ಅವರ ಮೇಲೆ ಹಾಕಿದ್ದೆವು. ವಿದ್ಯುತ್ ತಂತಿಗಳನ್ನು ಸುಸ್ಥಿತಿಯಲ್ಲಿ ಇಟ್ಟು ನಿರ್ವಹಣೆ ಮಾಡುವ ಜವಾಬ್ದಾರಿ ಕೆ.ಇ.ಬಿ ಅವರದ್ದು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಹಸು ವಿದ್ಯುತ್ ಅವಗಡದಲ್ಲಿ ತೀರಿಹೋಗಿರುವುದಕ್ಕೆ ಕೆ.ಇ.ಬಿ ಅಧಿಕಾರಿಗಳ ನಿರ್ಲಕ್ಷ್ಯತೆ ಕಾರಣ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಹಸು ರೂ.50000/- ಬೆಲೆ ಬಾಳುತ್ತಿರಲಿಲ್ಲ ಎಂದರೆ ಸರಿಯಲ್ಲ, ವೈದ್ಯರೊಂದಿಗೆ ಶರೀಕಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಸು ದಿನಕ್ಕೆ 8 ಲೀಟರ್ ಹಾಲು ಹಾಕುತ್ತಿದ್ದೆನು ಖರ್ಚು ಕಳೆದು ನನಗೆ ರೂ.200 ಉಳಿಯುತ್ತಿತ್ತು. ಆ ರೀತಿ ಹಾಲು ಹಾಕುತ್ತಿದ್ದ ಬಗೆಗ ಚೀಟಿಯಲ್ಲಿ ಬರೆದು ಕೊಡುತ್ತಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಪರಿಹಾರ ಪಡೆಯುವ ಸಲುವಾಗಿ ಮೇಲಿನ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ

ಮದ್ದೂರು.